'ಜಯಂತು, ನಾನು ಇನ್ನು ಮುಂದೆ ಇಲ್ಲಿರಲಾರೆ...' ಅಚ್ಚರಿಯಿಂದ ನೋಡಿದರೂ ಅವಳ ಕಣ್ಣಿನ ದೈನ್ಯ ನೋಡಿ ತಬ್ಬಿಕೊಂಡ.

'ಆಯಿ...'

ಸತ್ಯ ಹೆಮ್ಮೆಯಿಂದ, 'ಅರ್ಥ ಮಾಡಿಕೊಳ್ಳಕೆ ಮಗಳೇ ಬೇಕು ಅಂತೇನಿಲ್ಲ ಅಲ್ವಾ... ಸೂಕ್ಷ್ಮತೆಯಿದ್ದರೆ ಸಾಕು. ಇಷ್ಟು ಸಮಯ ಸಂಸಾರ ಮಾಡಿದೀನಿ. ನಿಮ್ಮಿಬ್ಬರನ್ನು ಅಪ್ಪನ ಜೊತೆಗೇ ಬೆಳೆಸಿದೀನಿ. ಇನ್ನು ಸಾಕು. ನಾನು ನನ್ನಷ್ಟಕ್ಕೆ ಇರೋಳು. ಅಪ್ಪ, ಸುಮಂತನ ಜೊತೆಗಿರ್ತಾರೆ. ಹಾಗೂ ಅಂದ್ಕೊಂಡೆ, ಯಾವುದಾದರು ಆಶ್ರಮ ಸೇರಬಹುದಲ್ವ ಅಂತ. ಆದರೆ, ಬೇಡವೆನಿಸಿತು; ನಂಗೆ ನನ್ನ ಮಕ್ಕಳ ಜೊತೆಗೆ ಇರೋದು ಹೆಚ್ಚು ಖುಷಿ ಅನಿಸಿತು.'

'ಆಯಿ... ಅಪ್ಪ, ಸಂಬಂಧಿಕರು, ಊರಿನವ್ರು...'

'ನಂಗೆ ಯಾರ ಮಾತಿನ ಪರಿವೆ ಇಲ್ಲ. ಯಾರು ಏನೆಂದರೂ ತೊಂದರೆ ಇಲ್ಲ. ನಿಂಗೆ ನಾನು ನಿನ್ನ ಜೊತೆಗಿರೋದು ಆಗಬಹುದಲ್ವೇ...'

'ಆಯೀ, ಯಾಕೆ ಹಾಗೆ ಹೇಳ್ತಿಯ... ನೀನು ಎಲ್ಲಿ, ಹೇಗೆ ಇರಬೇಕು ಎಂದಿದ್ಯೊ ಹಾಗೇ ನೆಮ್ಮದಿಯಾಗಿರು' ಕೈ ಅದುಮಿ ತಬ್ಬಿಕೊಂಡ.

ಹೊರಬಂದ ಜಯಂತ, ದತ್ತು ಮೇಷ್ಟ್ರ ಬಳಿ ಬಂದು, 'ಅಪ್ಪಯ್ಯ, ನಾನು ಅಮ್ಮನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗ್ತಿದೀನಿ. ಇನ್ನು ಮುಂದೆ ಅವಳು ಅಲ್ಲೇ ಇರ್ತಾಳೆ. ನೀವು ಇಲ್ಲಿ ಅಣ್ಣನೊಂದಿಗೆ...'

'ಅಂದ್ರೆ...'

ಸತ್ಯ ಕೋಣೆಯಿಂದ ಹೊರ ಬಂದು, 'ನಾನು ಮಗನ ಜೊತೆಗೆ ಇರೋಳು. ಮಗನ ಜೊತೆಗಂದ್ರೆ ನನ್ನ ನಿಮ್ಮ ಸಾಂಗತ್ಯ ಇಲ್ಲಿಗೆ ಸಾಕು. ನೀವೂ ಇಲ್ಲಿ ಮಗನ ಜೊತೆಗೆ ಇರಿ. ಇಷ್ಟು ವರ್ಷ ದಾಂಪತ್ಯದ ಅನುಭವ ಸಾಕು.'

'ತಲೆ ಕೆಟ್ಟಿದೆಯೇ ಹೇಗೆ.'

ಸತ್ಯ ನಕ್ಕು ಅಂದಳು: 'ಅದೇನೆ ಇರಲಿ. ನಾನಿನ್ನು ನನ್ನ ಪಾಡಿಗೆ ಇರುವವಳು. ಅಪ್ಪ ಮದ್ವೆ ಮಾಡಿದ. ಅದನ್ನು ಇಷ್ಟೂ ಸಮಯ ನಿಭಾಯಿಸಿದ್ದೇನೆ. ಬಿಟ್ಟು ಹೋಗೊದೇನೂ ಪ್ರಪಂಚಕ್ಕೆ ಹೊಸದಲ್ಲವಲ್ಲ. ಹಿಂದೆ ವಾನಪ್ರಸ್ಥ, ಸನ್ಯಾಸ ಅಂತ ಎಷ್ಟೊಂದು ಗಂಡಸರು ಹಾಗ್ಹಾಗೆ ಸಂಸಾರ ಬಿಟ್ಟು ಹೋದದ್ದಿದೆ. ಸ್ವಲ್ಪ ಬದಲಾವಣೆ ಅಷ್ಟೆ. ನನ್ನಿಂದ ಇನ್ನು ಯಾವ ಚಾಕರಿ ಮಾಡಲು ಸಾಧ್ಯವಿಲ್ಲ. ದೈಹಿಕವಾಗಿ ಕೂಡಾ ಶಕ್ತಿಯಿಲ್ಲ. ಹಾಗೆಂದು ಯಾವ ಬೇಸರವೂ ನನಗಿಲ್ಲ. ಸುಮಂತ ನಿಮ್ಮನ್ನು ಚೆನ್ನಾಗಿಯೇ ನೋಡಿಕೊಳ್ತಾನೆ.'

'ಅವ್ನು ನನ್ನ ಮಗ. ನನ್ನ ಹೇಗೆ ನೋಡಿಕೊಳ್ತಾನೆ ಅದು ನೀನು ಯೋಚನೆ ಮಾಡ್ಬೇಕಿಲ್ಲ. ನಿಂಗೆ ವಯಸ್ಸಾಗ್ತಾ ಮರುಳು, ಅಹಂಕಾರ ಜಾಸ್ತಿ ಆಗಿದೆ. ಏನಂದಾರು ಊರಿನವ್ರು ಅಂತೇನಾದ್ರೂ ಯೋಚನೆ ಮಾಡಿದ್ಯಾ. ನಿಂಗಿಲ್ಲಿ ಏನು ಕಡಿಮೆಯಾಗಿರೋದು, ಏನು ಡೈವೋರ್ಸ್ ಮಾಡ್ತೀಯಾ... ಅದೇ ಹೆಂಗಸರ ಬುದ್ಧಿ...' ಅಂದರು ದತ್ತು ಮೇಷ್ಟ್ರು ಕೋಪದಿಂದ.

ಸತ್ಯ ಮಕ್ಕಳತ್ತ ನೋಡಿ, 'ನಂಗೆ ನಿಮ್ಮ ಅಪ್ಪನ ಹತ್ರ ಸ್ವಲ್ಪ ಮಾತಾಡಬೇಕು' ಮಕ್ಕಳು ಸೊಸೆಯಂದಿರು ಅತ್ತ ನಡೆಯುತ್ತಿದ್ದಂತೆ ಕುರ್ಚಿ ಎಳೆದುಕೊಂಡು ಕೂತಳು.

'ದಾಂಪತ್ಯವೇ ಅಸ್ತಿತ್ವದಲ್ಲಿಲ್ಲದ ಮೇಲೆ ಡೈವೋರ್ಸಿಗೆ ಅರ್ಥ ಇದ್ಯಾ. ದಾಂಪತ್ಯದ ಅರ್ಥ ನಮ್ಮಲ್ಲಿ ಇತ್ತೆ, ಯೋಚನೆ ಮಾಡಿ. ನಮ್ಮಲ್ಲಿ ಒಬ್ಬ ಹೇಳ್ತಾ ಹೋಗಿದ್ದು ಇನ್ನೊಬ್ಬ ಕೇಳ್ತಾ ಬದುಕಿದ್ದು, ಇದು ದಾಂಪತ್ಯ ಅಲ್ಲ. ಈ ಕೊಂಕು, ಅಹಂಕಾರ ಎಲ್ಲದರ ಜೊತೆಗೆ ನಿಮ್ಮನ್ನು ಸಹಿಸುವಂತೆ ಮಾಡಿದ್ದು ನನ್ನ ಅಸಹಾಯಕತೆಯೇ ಹೊರತು ಬೇರೇನಲ್ಲ. ಇನ್ನು ನಂಗಿಲ್ಲಿ ಕಡಿಮೆಯಾಗಿರೋದು ಗೌರವ. ಗೊತ್ತೇ